# ಸ್ವಾಮಿ ಚಿತ್‌ಪ್ರಕಾಶಾನಂದ (?-೧೯೮೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ವೃದ್ಧ, ಅಸ್ವಸ್ಥ ಹಾಗು ತಪಸ್ಸಿನಲ್ಲಿ ನಿರತರಾದ ಸಾಧುಗಳಿಂದ ನಾನು ಬಹಳ ಆಕರ್ಷಿತನಾಗುತ್ತಿದ್ದೆ. ಈಗಲೂ ಅಂಥವರು ನನ್ನನ್ನು ಆಕರ್ಷಿಸುತ್ತಾರೆ. ಸಮಯ ಸಿಕ್ಕಿದರೆ ಅವರ ಜೀವನದ ಅನುಭವಗಳನ್ನು ಕೇಳಿ ತಿಳಿದುಕೊಳ್ಳುತ್ತೇನೆ. ಇದರಿಂದ ಆಧ್ಯಾತ್ಮ ಜೀವನದ ಅಡಚಣೆ-ಆಪತ್ತುಗಳು, ಸಂಗ್ರಾಮ-ಸಿದ್ಧಿಗಳನ್ನು ತಿಳಿದು ಕೊಳ್ಳುವ ಇಚ್ಛೆ ನನ್ನಲ್ಲಿ ಜಾಗೃತವಾಗಿರುತ್ತದೆ. ಅನೇಕರು ಇಂಥವ ರಿಂದ ದೂರವಿರುತ್ತಾರೆ. ನಾನು ಇಂಥವರೊಂದಿಗೆ ಮಾತನಾಡಿ ಆನಂದಪಡುತ್ತೇನೆ.

ಕಾಶಿ ಸೇವಾಶ್ರಮದ ೧೦ನೆ ನಂಬರದ ವಾರ್ಡ್, ನಿವೃತ್ತ ಹಾಗು ಅಸ್ವಸ್ಥ ಸಾಧುಗಳ ನಿವಾಸವಾಗಿತ್ತು. ೧೬.೦೮.೧೯೮೨ ರಂದು ಬೆಳಗ್ಗೆ ನಾನು ಸ್ವಾಮಿ ಚಿತ್‌ಪ್ರಕಾಶಾನಂದರ (ತಾರಿಣೀ ಮಹಾರಾಜ್) ಕೋಣೆಗೆ ಹೋದೆ. ಮಹಾರಾಜರು ತಮ್ಮ ಕೊನೆಯ ದಿನಗಳಲ್ಲಿ ಅಂಧರಾಗಿದ್ದರು. ನಾನು ನನ್ನ ಪರಿಚಯ ವನ್ನು ಮಾಡಿಕೊಡುತ್ತಲೇ ಅವರೆಂದರು, ''ನೋಡು, ನಾನು ೧೯೧೩ರಲ್ಲಿ ಬೇಲೂರು ಮಠದಲ್ಲಿ ಸೇರಿಕೊಂಡೆ. ರಾಜಾ ಮಹಾ ರಾಜರು ನನಗೆ ದೀಕ್ಷೆಯನ್ನು ನೀಡಿದರು. ಅವರಿಂದ ನಾನು ಸಂನ್ಯಾಸವನ್ನು ಪಡೆಯುವುದಾಗಿ ಹೇಳಿದಾಗ ಅವರು ಅತ್ಯಂತ ಆನಂದಗೊಂಡರು. ೧೯೨೩ರಲ್ಲಿ ಜಯರಾಂಬಾಟಿಯಲ್ಲಿ ಶರತ್ ಮಹಾರಾಜರು ನನಗೆ ಸಂನ್ಯಾಸ ನೀಡಿದರು.''

''ನೋಡಪ್ಪ, ನನಗೆ ಕಣ್ಣು ಕಾಣಿಸುವುದಿಲ್ಲ. ಆದರೆ ಒಂದು ಗಂಟೆಯ ಕಾಲ ಹಾಡಬಲ್ಲೆ'' ಎನ್ನುತ್ತ ಅವರು ತಾಯಿ ದುರ್ಗೆಯ ಹಾಡನ್ನು ಹಾಡಲಾರಂಭಿಸಿದರು. 'ಆಮಿ ದುರ್ಗಾ ದುರ್ಗಾ ದುರ್ಗಾ ಬೋಲೆ ಮಾ ಜದಿ ಮರಿ ...' *

''ನಾನು ಶ್ರೀಮಾತೆಯವರ ದರ್ಶನವನ್ನು ಪಡೆದಿರುವೆ. ಈಗ ಕೆಲವೊಮ್ಮೆ ಕರಜಪವನ್ನೂ, ಕೆಲವೊಮ್ಮೆ ಮಾಲೆ ಹಿಡಿದು ಜಪವನ್ನು ಮಾಡುತ್ತೇನೆ. ಭಗವಂತನ ಸ್ಮರಣ-ಮನನವನ್ನು ಮಾಡುತ್ತೇನೆ. ನನಗೀಗ ೯೦ರ ಮೇಲಾಗಿದೆ'' ಎಂದರು.

ಈ ವೃದ್ಧ ಸಾಧುಗಳನ್ನು ನೋಡಿದಾಗ ನನಗೆ ಅಂಥ ಮತ್ತೊಬ್ಬ ಸಾಧುಗಳ ನೆನಪಾಯಿತು. ಕಣ್ಣು ಕಾಣಿಸದ ಸಾಧು ಗಳೊಬ್ಬರು ಮತ್ತೊಬ್ಬ ಸಾಧುಗಳ ಕೈಹಿಡಿದು ಕೇದಾರನಾಥ ಶಿವ ದರ್ಶನಕ್ಕೆ ಹೋಗಿದ್ದರು. ಅದನ್ನು ಕಂಡ ಬೇರೊಬ್ಬ ಸಾಧುಗಳು, ''ನಿಮಗೆ ಕಣ್ಣು ಕಾಣಿಸದು. ಕಷ್ಟಪಟ್ಟು ಇಷ್ಟು ದೂರ ಏಕೆ ಬಂದಿರಿ?'' ಎಂದು ಪ್ರಶ್ನಿಸಿದಾಗ, ಅಂಧ ಸಾಧುಗಳು ಉತ್ತರಿಸಿ ದರು, ''ನೀವು ಹೇಳುವುದು ಸರಿಯೇ. ಭಗವಂತನ ದರ್ಶನ ವನ್ನು ಪಡೆಯಲು ನನಗೆ ಆಗದು. ಆದರೆ ಬಾಬಾ ಕೇದಾರನಾಥ ನನ್ನ ದರ್ಶನ ಮಾಡುವನಲ್ಲ!''

* 'ಶ್ರೀರಾಮಕೃಷ್ಣ ಕಥಾಮೃತ'ದಿಂದ ಆಯ್ದ ಹಾಡಿನ ಪಂಕ್ತಿಗಳು

# ಸ್ವಾಮಿ ರಘುವರಾನಂದ (೧೮೯೫-೧೯೮೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

೨.೧೦.೧೯೭೭ರಂದು ಕಾಶಿಯಲ್ಲಿ ಸ್ವಾಮಿ ರಘುವರಾ ನಂದರ (ರಾಮಪ್ರಸಾದ ಮಹಾರಾಜ್) ಪರಿಚಯವಾಯಿತು. ತಪಸ್ವಿ ಸಾಧುಗಳ ಮೇಲೆ ನನಗೆ ಬಹಳ ಆಕರ್ಷಣೆ. ಅವರು ತಮ್ಮ ಸಮಯವನ್ನು ಹೇಗೆ ಕಳೆಯುತ್ತಾರೆ ಎಂದು ತಿಳಿದು ಕೊಳ್ಳಲು ನನಗೆ ತುಂಬಾ ಕುತೂಹಲ. ನಾನು ಭಾರತಕ್ಕೆ ಮರಳಿ ದಾಗ ಇಂಥವರ ಸಂಗಲಾಭ ಪಡೆಯಲು ಕಾಶಿ, ಕಂಖಲ್, ಬೇಲೂರು ಮಠಗಳಿಗೆ ಹೋಗುತ್ತೇನೆ. ಅವರಿಂದ ತಮ್ಮ ಸ್ಮೃತಿ ಕಥೆ ಹಾಗು ಅನುಭವಗಳನು ಕೇಳುತ್ತೇನೆ. ಕ್ರಿಸ್‌ಮಸ್ ಹೊತ್ತಿಗೆ ಅಮೆರಿಕನ್ ಭಕ್ತರು ನನಗೆ ಕೊಟ್ಟ ಕಾಣಿಕೆಯಿಂದ ಹಿರಿಯ ಅಸ್ವಸ್ಥ, ಹಾಗೂ ತಪಸ್ಸಿನಲ್ಲಿ ನಿರತರಾದ ಸಾಧುಗಳಿಗೆ ಸಹಾಯ ಮಾಡುತ್ತೇನೆ. ರಾಮಪ್ರಸಾದ ಮಹಾರಾಜರಿಗೆ ಆಗಾಗ ಹಣ ಕಳುಹಿಸುತ್ತಿದ್ದೆ.

೨೨.೦೮.೧೯೭೮ರಂದು ಮಹಾರಾಜರು ತಮ್ಮ ಸಾಧು ಜೀವನದ ಸಂಬಂಧವಾಗಿ ಕಾಶಿಯಿಂದ ನನಗೊಂದು ದೀರ್ಘ ಪತ್ರವನ್ನು ಬರೆದರು. ಅವರು ೧೯೧೭ರಲ್ಲಿ ಕಾಶಿ ಸೇವಾಶ್ರಮ ವನ್ನು ಸೇರಿದರು. ೧೯೧೮ರಲ್ಲಿ ರಾಜಾ ಮಹಾರಾಜರು ಅವರಿಗೆ ಬ್ರಹ್ಮಚರ್ಯ ದೀಕ್ಷೆಯನ್ನು ನೀಡಿದರು. ತಮ್ಮ ತಾಯಿ-ತಂದೆ ಯರ ಏಕಮಾತ್ರ ಸಂತಾನವಾಗಿದ್ದುದರಿಂದ, ಅವರ ತಂದೆ ತೀರಿ ಕೊಂಡಾಗ ಸ್ವಾಮಿ ಶುಭಾನಂದರು ಅವರನ್ನು ತಮ್ಮ ತಾಯಿಯ ಸೇವೆ ಮಾಡಲು ಮನೆಗೆ ಕಳುಹಿಸಿದರು. ಕೊನೆಗೆ ಅವರು ತಮ್ಮ


ತಾಯಿಯನ್ನು ತಮ್ಮೊಂದಿಗೆ ಕರೆತಂದು, ಅವರನ್ನು ಕಾಶಿಯ ವೃದ್ಧಾಶ್ರಮದಲ್ಲಿರಿಸಿ, ಸಂನ್ಯಾಸವನ್ನು ಪಡೆದರು. ಆ ಸಮಯ ದಲ್ಲಿ ಅವರು ಹರಿ ಮಹಾರಾಜರ ಸೇವೆಯನ್ನೂ ಮಾಡಿದ್ದರು. ೧೯೨೩ರಲ್ಲಿ ಅವರು ಮಹಾಪುರುಷ ಮಹಾರಾಜರಿಂದ ಮಂತ್ರ ದೀಕ್ಷೆಯನ್ನು ಪಡೆದು ೧೯೨೮ರಲ್ಲಿ ಸಂನ್ಯಾಸ ಗ್ರಹಣ ಮಾಡಿದರು. ನಂತರ ದೀರ್ಘ ಸಮಯ ಅವರು ಕಂಖಲ್ ಸೇವಾಶ್ರಮದ ಅಧ್ಯಕ್ಷರಾಗಿದ್ದು ೧೯೫೮ರಲ್ಲಿ ನಿವೃತ್ತರಾಗಿ ಎರಡು ವರ್ಷಗಳ ಕಾಲ ಬಾರ್ಲೋಗಂಜ್‌ನಲ್ಲಿ ಗುರುದಾಸ ಮಹಾರಾಜರ ಸೇವೆಯನ್ನು ಮಾಡಿದರು. ೧೯೫೬ ರಿಂದ ೯ ವರ್ಷಗಳ ಕಾಲ ಹೃಷಿಕೇಶದಲ್ಲಿ ತಪಸ್ಸನ್ನಾಚರಿಸಿದರು. ಬಳಿಕ ೧೯೬೫ನೇ ಇಸವಿಯಿಂದ ಆಮರಣ ಪರ್ಯಂತ ಕಾಶಿಯಲ್ಲಿದ್ದರು.

ಅವರು ಕಾಶಿ ಸೇವಾಶ್ರಮದ ೧೦ನೇ ನಂಬರದ ವಾರ್ಡ್‌ನಲ್ಲಿ ಅಹರ್ನಿಶಿ ಜಪ-ಧ್ಯಾನ ಹಾಗು ಶಾಸ್ತ್ರಾಧ್ಯಯನದಲ್ಲಿ ಮಗ್ನರಾಗಿರುತ್ತಿದ್ದರು. ೧೯೮೩ರಲ್ಲಿ ನಾನು ಕಾಶಿಗೆ ಹೋಗಿದ್ದಾಗ ಅಕ್ಟೋಬರ್ ೨೭ರಂದು ಚೌಖಾಂಬಾದಲ್ಲಿ ಪ್ರಮದದಾಸ ಮಿತ್ರರ ಮನೆಯನ್ನು ತೋರಿಸಲು ನನ್ನನ್ನು ಕರೆದುಕೊಂಡು ಹೋಗಿದ್ದರು. ಸ್ವಾಮೀಜಿಯವರಿದ್ದ 'ಗೋಪಾಲಲಾಲ್ ವಿಲ್ಲಾ'ವನ್ನೂ ತೋರಿಸಿದ್ದರು. ಈಗ ಅದೊಂದು ಶಾಲೆಯಾಗಿ ಮಾರ್ಪಾಟಾಗಿದೆ.

ಒಂದು ದಿನ (೧೬.೦೮.೧೯೮೨) ರಾಮಪ್ರಸಾದ ಮಹಾರಾಜರ ಕೋಣೆಗೆ ಹೋಗಿ ನೋಡುತ್ತೇನೆ, ಅವರು ಮಾರುಕಟ್ಟೆಯಿಂದ ಕಾಶಿ-ಸೀಬೆಹಣ್ಣನ್ನು ಕೊಂಡು ತಂದು ಜ್ಯಾಮ್ ತಯಾರಿಸುತ್ತಿದ್ದಾರೆ! ''ಮಹಾರಾಜ್, ನೀವೇನು ಇದೆಲ್ಲ ತಯಾರಿಸುತ್ತಿರುವಿರಿ!'' ಎಂದು ನಾನು ಕೇಳಿದಾಗ ಅವರೆಂದರು, ''ನೋಡು ೧೦ನೆ ನಂಬರದ ವಾರ್ಡ್‌ನಲ್ಲಿ ಅನೇಕ ಮಂದಿ ವೃದ್ಧ ಸಾಧುಗಳಿದ್ದಾರೆ. ಅವರಿಗೆ ಏನೂ ರುಚಿಸುವುದಿಲ್ಲ. ಆದ್ದರಿಂದ ಅವರಿಗಾಗಿ ಈ ಸೀಬೇಹಣ್ಣಿನ ಜಾಮ್ ತಯಾರಿಸುತ್ತಿದ್ದೇನೆ'' ಎಂದರು. ಇದೊಂದು ಸಾಮಾನ್ಯ ಕೆಲಸವೇ ಆಗಿದ್ದರೂ ಅವರಿಗಿದ್ದ ಭಾವನೆಗಳು ಅಮೂಲ್ಯ ಹಾಗೂ ಅನುಪಮ. ಬಳಿಕ ಅವರು ಎರಡು ದಿನ ಆರಾರೂಟು ಬಿಸ್ಕತ್ತುಗಳ ನಡುವೆ ಎರಡು ಚಮಚ ಸೀಬೆಹಣ್ಣಿನ ಜಾಮ್ ಹರಡಿ ನನಗೆ ಕೊಟ್ಟರು. ಅವರು ತೋರಿದ ಪ್ರೀತಿಯಿಂದ ನಾನು ಮಂತ್ರಮುಗ್ಧನಾದೆ. ಆ ದಿನ ಮಹಾರಾಜ್ ನನಗೊಂದು ಅಮೂಲ್ಯ ಸಂಪತ್ತನ್ನು ನೀಡಿದರು. ಅದೇನೆಂದರೆ, ಠಾಕೂರರ ನೇರ ಶಿಷ್ಯರು ಹಾಗು ರಾಮಕೃಷ್ಣ ಸಂಘದ ಅನೇಕ ವಿಶಿಷ್ಟ ಸಾಧುಗಳ ಸ್ಮೃತಿಕಥೆಗಳನ್ನು ಬರೆದಿದ್ದ ಅಧ್ಯಾಪಕ ಗುರುದಾಸ ಗುಪ್ತರ ಡೈರಿಗಳು.

೧೯೭೮ರಲ್ಲಿ ನಾನು ಅವರನ್ನು ಪುರಶ್ಚರಣದ ಸಂಬಂಧವಾಗಿ ಪ್ರಶ್ನಿಸಿದ್ದೆ. ಅವರು ಇದರ ಬಗ್ಗೆ ಕೂಲಂಕಷವಾಗಿ ನನಗೆ ವಿವರಿಸಿದರು. ಕೊನೆಯಲ್ಲಿ ಬರೆದಿದ್ದರು –''ಕಾಶಿಗೆ ಬಂದೆ, ಆದರೆ ವಿಶ್ವನಾಥನು ಇನ್ನೂ ನನಗೆ ಮುಕ್ತಿಯನ್ನು ನೀಡುತ್ತಿಲ್ಲ. ಅವನಿಚ್ಛೆಯಂತೆಯೆ ಆಗಲಿ – ಈ ಭರವಸೆಯಿಂದ ನಾನು 'ಆ' ದಿನವನ್ನು ಪ್ರತೀಕ್ಷಿಸುತ್ತಿರುವೆ. ಆತ ಯಾವಾಗ ಕೃಪೆಗೈಯುವನೆಂದು ಆತನಿಗೇ ಗೊತ್ತು.'' ೧೮ ವರ್ಷಗಳನ್ನು ಕಾಶಿಯಲ್ಲಿ ಕಳೆದಿದ್ದ ಅವರು ೭.೦೯.೧೯೮೩ ರಂದು, ೮೮ ವರ್ಷ ವಯಸ್ಸಿನಲ್ಲಿ ದೇಹವನ್ನು ತ್ಯಜಿಸಿದರು.

ಯುವಚೇತನ



## ಅವತಾರ ಪುರುಷರ ಮಹಿಮೆ

ಯಾರ ಕೃಪೆಯಿಂದ ಧರ್ಮಗ್ರಂಥಗಳು ಅಷ್ಟೊಂದು ಹೊಗಳುವ ಆತ್ಮಪರಿಜ್ಞಾನವನ್ನು ಒಂದೇ ಒಂದು ನಿಮಿಷದಲ್ಲಿ ಸಾಧಿಸಬಹುದೋ ಅಂತಹ ಸಚಲ ತೀರ್ಥಗಳೇ ಅವತಾರಪುರುಷರು. ಹುಟ್ಟಿದಾಗಲೇ ಅವರು ಬ್ರಹ್ಮಜ್ಞಾನಿಗಳು. ಬ್ರಹ್ಮನಿಗೂ ಬ್ರಹ್ಮಜ್ಞಾನಿಗೂ ಯಾವೊಂದು ವ್ಯತ್ಯಾಸವೂ ಇಲ್ಲ. 'ಯಾರು ಬ್ರಹ್ಮನನ್ನು ಅರಿತಿದ್ದಾನೋ ಅವನು ಬ್ರಹ್ಮನೇ ಆಗಿದ್ದಾನೆ'. **'ಬ್ರಹ್ಮವೇದ ಬ್ರಹ್ಮವ ಭವತಿ'** – *(ಮುಂಡಕ, ೩.೨.೯)* ಮನಸ್ಸಿನಿಂದ ಆತ್ಮನನ್ನು ಗ್ರಹಿಸಲಾಗುವುದಿಲ್ಲ. ಏಕೆಂದರೆ ಆತ್ಮವೇ ಜ್ಞಾನವಸ್ತು... ಆದ್ದರಿಂದ ಮಾನವನ ಕಾರ್ಯಕಾರಣ ಸಂಬಂಧ ಜ್ಞಾನವು ಆತ್ಮಪ್ರತಿಷ್ಠಿತರಾದ ಅವತಾರಿಗಳವರೆಗೆ ಮಾತ್ರ ಹೋಗಲು ಸಾಧ್ಯ. ಮಾನವನ ಮನಸ್ಸು ಗ್ರಹಿಸಬಲ್ಲ ಭಗವಂತನ ಶ್ರೇಷ್ಠರೂಪವೇ ಅವತಾರ. ಅದರಿಂದಾಚೆ ಕಾರ್ಯಕಾರಣಸಂಬಂಧ ಜ್ಞಾನವಿಲ್ಲ. ಅಂತಹ ಬ್ರಹ್ಮಜ್ಞಾನಿಗಳು ಈ ಪ್ರಪಂಚದಲ್ಲಿ ಅತಿ ವಿರಳ. ಅಂಥವರನ್ನು ಅರ್ಥ ಮಾಡಿಕೊಳ್ಳುವವರು ಕೇವಲ ಕೆಲವು ಮಂದಿ ಮಾತ್ರ. ಅವರೇ ಧರ್ಮಗ್ರಂಥಗಳಲ್ಲಿರುವ ಸತ್ಯಕ್ಕೆ ಪ್ರಮಾಣ. ವಿಶ್ವಸಾಗರದಲ್ಲಿ ಇರುವ ಕೆಲವು ಜ್ಯೋತಿರ್ಮಯ ಸ್ತಂಭಗಳು ಅವರು. ಇಂತಹ ಅವತಾರ ಪುರುಷರ ಸಂಗದಿಂದ, ಅವರ ಕೃಪೆಯಿಂದ ನಿಮಿಷಮಾತ್ರದಲ್ಲಿ ಮನಸ್ಸಿನ ಅಂಧಕಾರ ತೊಲಗಿ ಹೃದಯದಲ್ಲಿ ಸಾಕ್ಷಾತ್ಕಾರದ ಮಿಂಚು ಹೊಳೆಯುವುದು. ಏಕೆ ಮತ್ತು ಯಾವ ವಿಧಾನದಿಂದ ಅದು ಬರುತ್ತದೆಂಬುದನ್ನು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಆದರೆ ಅದು ಬಂದೇ ಬರುತ್ತದೆ. ಅದು ಹಾಗೆ ಸಂಭವಿಸಿದ್ದನ್ನು ನಾನು ನೋಡಿರುವೆ. ಶ್ರೀಕೃಷ್ಣ ಆತ್ಮಸ್ಥಿತನಾಗಿ ಗೀತೆಯನ್ನು ಬೋಧಿಸಿದನು. ಗೀತೆಯ ಸೂತ್ರಗಳಲ್ಲಿ ಎಲ್ಲೆಲ್ಲಿ 'ನಾನು' ಎಂಬುದು ಬರುತ್ತದೆಯೋ ಅಲ್ಲೆಲ್ಲ ಯಥಾವಿಧಿಯಾಗಿ ಆತ್ಮನನ್ನು ಉದ್ದೇಶಿಸಿರುತ್ತದೆ. 'ಕೇವಲ ನನ್ನನ್ನು ಶರಣುಹೊಂದಿ' ಎಂದರೆ 'ಆತ್ಮನಲ್ಲಿ ಲೀನವಾಗಿ' ಎಂದರ್ಥ. ಈ ಆತ್ಮಪರಿಜ್ಞಾನವೇ ಗೀತೆಯ ಚರಮಗುರಿ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು.೧೯)*